KAKB320000452015

Presented on : 12-01-2015
Registered on : 12-01-2015
Decided on : 28-03-2026
Duration : 11 years/ 02 months/ 16 days.

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಅಫಜಲಪೂರ.**

**ಉಪಸ್ಥಿತರುಃ**
**ಶ್ರೀ ಅನಿಲ ಅಮಾತೆ**
ಬಿ.ಎ.ಎಲ್.ಎಲ್.ಬಿ. (Hon's).,
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಅಫಜಲಪೂರ.

**ಸಿ.ಸಿ.ನಂ.07/2015**

ದಿನಾಂಕಃ 28ನೇ ಮಾರ್ಚ -2026 ರಂದು

**ಫಿರ್ಯಾದಿದಾರರುಃ**

(ಕರ್ನಾಟಕ ರಾಜ್ಯ, ಅಫಜಲಪೂರ ಪೊಲೀಸರಿಂದ)
**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ದ -**

ಆರೋಪಿ/ತರುಃ

ರಾಮಲಿಂಗ ತಂದೆ ಶರಣಪ್ಪ ವಡ್ಡರ,
36 ವರ್ಷ, ಉಃ ಕೂಲಿ ಕೆಲಸ,
ವಾಸಃ ರೇವೂರ(ಬಿ) ಗ್ರಾಮ,
ತಾಃ ಅಫಜಲಪೂರ, ಜಿಃ ಕಲಬುರಗಿ.

(ಆರೋಪಿತನ ಪರ ಶ್ರೀ ಎಸ್.ಎಸ್.ಪಾಟೀಲ್. ವಕೀಲರು)

1. ಪ್ರಕರಣ ನಡೆದ ದಿನಾಂಕ : 17.05.2010
2. ಪ್ರಕರಣ ದಾಖಲಾದ ದಿನಾಂಕ : 17.05.2010
3. ಆರೋಪಿತನನ್ನು ಬಂಧಿಸಿದ ದಿನಾಂಕ : 12.06.2015
4. ಆರೋಪಿತನನ್ನು ಬಿಡುಗಡೆ ಮಾಡಿದ ದಿನಾಂಕ: 27.06.2015

| | | | |
|---|---|---|---|
| 5. | ಫಿರ್ಯಾದಿದಾರರ ಹೆಸರು | : | ಸರ್ಕಾರಿ ತರ್ಫೆ ಮಂಜುನಾಥ ಎಸ್.ಕುಸುಗಲ್ ಪಿ.ಎಸ್.ಐ. |
| 6. | ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕ | : | 28.01.2019 |
| 7. | ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕ | : | 25.02.2026 |
| 8. | ಅಪಾದನೆಗಳು | : | ಭಾ.ದಂ.ಸಂ.ಕಲಂ. 147, 148, 341, 353, 324, 333, 504 ಸಹವಾಚಕ ಕಲಂ.149 ರಡಿಯಲ್ಲಿ |
| 9. | ನ್ಯಾಯಾಧೀಶರ ತೀರ್ಮಾನ | : | ಅಂತಿಮ ಆದೇಶದಂತೆ |

ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಅಫಜಲಪೂರ.

**ತೀರ್ಪು**

ಅರಕ್ಷಕ ವೃತ್ತ ನೀರಿಕ್ಷಕರು ಅಫಜಲಪೂರ ಪೊಲೀಸ್ ಠಾಣೆ, ಅಫಜಲಪೂರ ಇವರು 26ನೇ ಆರೋಪಿತನ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ.147, 148, 341, 353, 333, 324, 504 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪಾದನೆಗಾಗಿ ವಿಭಜಿತ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಣೆಃ-**

ದಿನಾಂಕಃ 08.05.2010 ರಂದು ನಡೆದ ಅಫಜಲಪೂರ ತಾಲೂಕಿನ ಗ್ರಾಮ ಪಂಚಾಯತ ಚುನಾವಣೆಯ ಮತ ಎಣಿಕೆಯು ಅಫಜಲಪೂರ ಪಟ್ಟಣದ

ಮಹಾಂತೇಶ್ವರ ಕಾಲೇಜಿನಲ್ಲಿ ದಿನಾಂಕಃ 17.05.2010 ರಂದು ಬೆಳಿಗ್ಗೆ 07-00 ಗಂಟೆಗೆ ಪ್ರಾರಂಭವಾಗಿದ್ದು, ಚುನಾವಣೆ ಬಂದೊಬಸ್ತಕ್ಕಾಗಿ ಇದ್ದ ಚಾಸಾ-1 ಮತ್ತು ಚಾಸಾ-4 ರಿಂದ 15 ರ ವರಗಿನವರು ಕಾಲೇಜಿನ ಮುಖ್ಯದ್ವಾರದಲ್ಲಿ ಕರ್ತವ್ಯದಲ್ಲಿದ್ದಾಗ 8-30 ಎ.ಎಮ್ ಸಮಯದಲ್ಲಿ ಬಹಳಷ್ಟು ಜನರು ಮುಖ್ಯದ್ವಾರದ ಹತ್ತಿರ ನೆರೆದು ಧ್ವನಿರ್ಧಕದಲ್ಲಿ ಏನು ಹೇಳುತ್ತಿದ್ದಾರೆ ಕೇಳುತ್ತಿಲ್ಲ ಯಾವ ಗ್ರಾಮ ಪಂಚಾಯತಿಯ ಯಾವ ಊರಿನ ಮತ ಎಣಿಕೆ ನಡೆಯುತ್ತಿದೆ ಎಂಬ ಬಗ್ಗೆ ಜೋರಾಗಿ ಹೇಳಬೇಕು ಅಂತಾ ಜನರು ಗಲಾಟೆ ಮಾಡಹತ್ತಿದರು. ಆಗ ಚಾಸಾ-1 ಮತ್ತು ಚಾಸಾ-4 ರಿಂದ 15 ರ ವರೆಗಿನವರು ನೀವು ಗಲಾಟೆ ಮಾಡಬೇಡಿರಿ ನಿಧಾನವಾಗಿ ಸಾಲಾಗಿ ಬನ್ನಿರಿ ಚುನಾವಣೆ ಅಧಿಕಾರಿಗೆ ಭೇಟಿಯಾಗಿ ಇನ್ನೊಂದು ಧ್ವನಿವರ್ಧಕ ಹಚ್ಚಲು ತಿಳಿಸುತ್ತೇನೆ ಅಂತ ಅನ್ನುವಾಗ 26ನೇ ಆರೋಪಿತನು ಉಳಿದ ಆರೋಪಿತರೊಂದಿಗೆ ಸೇರಿ ಕೊಂಡು ಏ ಬೋಸಡಿ ಮಕ್ಕಳೆ ಒಳಗಡೆ ಬಿಡುತ್ತಿರಿಲ್ಲಾ ಅಂತಾ ಚೀರಾಡುತ್ತಾ ಮುಖ್ಯದ್ವಾರದ ಗೇಟನ್ನು ಒತ್ತಿ ಒಳಗೆ ನುಗ್ಗಿದರು. ಸದರಿ ಜನರು ಮತ ಎಣಿಕೆ ಕೇಂದ್ರದಲ್ಲಿ ಹೋಗಿ ಗಲಾಟೆ ಮಾಡಬಹುದು ಅಥವಾ ಮತಪೆಟ್ಟಿಗೆ ಹಾಳು ಮಾಡಬಹುದು ಅಂತಾ ತಿಳಿದು ಫಿರ್ಯಾದಿಯು ಚಾಸಾ-4 ರಿಂದ 15 ಇವರ ಸಹಾಯದಿಂದ ಗೇಟಿನ ಹೊರಗಡೆ ಕಳಿಸುವಾಗ ಸದರಿ ಆರೋಪಿತರು ಸರ್ಕಾರಿ ಕೆಲಸದಲ್ಲಿ ಅಡೆತಡೆ ಮಾಡಿ ಕಲ್ಲು ತೂರಾಟ ಮಾಡಿದ್ದು ಇದರಿಂದ ಚಾಸಾ-1 ಇವರ ತಲೆಯ ಹಿಂಭಾಗಕ್ಕೆ ಕಲ್ಲು ಬಡಿದು ರಕ್ತಗಾಯಪಡಿಸಿರುತ್ತಾರೆಂದು ಸದರಿ ಆರೋಪಿತರ ವಿರುದ್ದ ಫಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಅಫಜಲಪೂರ ಪೊಲೀಸರು ತಮ್ಮ ಠಾಣಾ ಗುನ್ಹಾ ನಂ.74/2010 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 147, 148, 341, 353, 333, 324, 504 ಸಹವಾಚಕ ಕಲಂ.149 ರಡಿಯಲ್ಲಿನ ಶಿಕ್ಷಾರ್ಹ ಅಪರಾಧದಿಂದ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ಆರೋಪಿತನು ಮೂಲ ಅಪರಾಧ ಪ್ರಕರಣ ಸಂಖ್ಯೆಃ 131/2011 ನೇದ್ದರಲ್ಲಿ ತಲೆಮರಿಸಿಕೊಂಡಿದ್ದು, ಆದ್ದರಿಂದ ಸದರಿ ಪ್ರಕರಣದಲ್ಲಿ ಪ್ರಸ್ತುತ ಆರೋಪಿತನ ವಿರುದ್ಧ ಪ್ರತ್ಯೇಕ ಈ ವಿಭಜಿತ ಪ್ರಕರಣವನ್ನು ದಾಖಲಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ಆರೋಪಿತನು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತನಿಗೆ ನೀಡಿ, ದೋಷಾರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಭಾರತೀಯ ದಂಡ ಸಂಹಿತೆ ಕಲಂ. 504, 324, 332, 353, 341, 148, 143 ಸಹವಾಚಕ ಕಲಂ.149 ರಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ ಆರೋಪಿತನಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತನ ವಿರುದ್ದ ಆಪಾದನೆಗಳನ್ನು ಸಾಬೀತು ಪಡಿಸುವ ಸಲುವಾಗಿ ಒಟ್ಟು 07 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ 7 ಎಂದು ಸಾಕ್ಷಿ ವಿಚಾರಣೆ ಮಾಡಿಸಿದ್ದು, ನಿಶಾನೆ ಪಿ-1 ರಿಂದ 08 ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷಿದಾರರ ವಿಚಾರಣೆಯಾದ ನಂತರ ಅ.ಪ್ರ.ಸಂ.ಕಲಂ.313 ರಡಿಯಲ್ಲಿ 26ನೇ ಆರೋಪಿತನ ಹೇಳಿಕೆಯನ್ನು ಪಡೆಯಲಾಯಿತು. 26ನೇ ಆರೋಪಿತನು ತಮ್ಮ ಪರವಾಗಿ ಸಾಕ್ಷಿ ವಿಚಾರಣೆಗೆ ಮುಂದಾಗಿರುವುದಿಲ್ಲ.

6. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

7. ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ

<u>ಅಂಶಗಳು</u>

1. ಅಫಜಲಪೂರ ಪಟ್ಟಣದ ಮಹಾಂತೇಶ್ವರ ವಿದ್ಯಾ ವರ್ಧಕ ಸಂಘದ ಡಿ.ಎಡ್ ಮತ್ತು ಬಿ.ಎಡ್ ಕಾಲೇಜಿನಲ್ಲಿ ದಿನಾಂಕಃ 17.05.2010 ರಂದು ಅಫಜಲಪೂರ ತಾಲೂಕಿನ ಗ್ರಾಮ ಪಂಚಾಯಿತ ಚುನಾವಣೆ ಮತ ಎಣಿಕೆ ನಡೆಯುತ್ತಿರುವ ಸಂದರ್ಭದಲ್ಲಿ ಬೆಳಿಗ್ಗೆ 8-30 ಗಂಟೆಯ ಸಮಯದಲ್ಲಿ 26ನೇ ಆರೋಪಿಯು ಉಳಿದ ಆರೋಪಿತರೊಂದಿಗೆ ಸದರಿ ಕಾಲೇಜಿನ ಮುಖ್ಯ ದ್ವಾರದ ಬಳಿ ಅಪರಾಧ ಮಾಡುವ ಉದ್ದೇಶವನ್ನು ಹೊಂದಿ ಅಕ್ರಮ ಕೂಟ ರಚಿಸಿಕೊಂಡು ಚಾಸಾ-1 ಮತ್ತು ಚಾಸಾ-4 ರಿಂದ 15 ರವರಿಗೆ ಏ ಬೋಸಡಿ ಮಕ್ಕಳೇ ಒಳಗಡೆ ಬಿಡುತ್ತಿರಿಲ್ಲಾ ಎಂದು ಚಿರಾಡುತ್ತಾ ಅವಾಚ್ಯ ಶಬ್ದಗಳಿಂದ ಬೈದು ಆ ಮೂಲಕ ಭಾ.ದಂ.ಸಂ.ಕಲಂ. 504 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

2. ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಅದೇ ವಿಚಾರವಾಗಿ 26ನೇ ಆರೋಪಿತನು ಉಳಿದ ಆರೋಪಿತರೊಂದಿಗೆ ಸೇರಿ ಅಕ್ರಮ ಕೂಟ ರಚಿಸಿಕೊಂಡು ಅಫಜಲಪೂರ ಪಟ್ಟಣದ ಮಹಾಂತೇಶ್ವರ ವಿದ್ಯಾವರ್ಧಕ ಸಂಘದ ಡಿ.ಎಡ್. ಮತ್ತು ಬಿ.ಎಡ್ ಕಾಲೇಜಿನ ಮುಖ್ಯ ದ್ವಾರವನ್ನು ಜೋರಾಗಿ ತೆಗೆಯಲು ಪ್ರಯತ್ನಿಸಿದಾಗ ಅದನ್ನು ತಡೆಯಲು ಬಂದ ಚಾಸಾ-1 ಮತ್ತು ಚಾಸಾ-4 ರಿಂದ 15 ರವರ ಮೇಲೆ ಕಲ್ಲು ತೊರಾಟ ನಡೆಸಿದ್ದು ಆಗ ಸದರಿ ಕಲ್ಲು ಚಾಸಾ-1 ರವರ ತಲೆಗೆ ತಾಗಿ ಆತನಿಗೆ ಸಾದಾ ಸ್ವರೂಪದ ರಕ್ತಗಾಯ ಉಂಟುಪಡಿಸಿ ಆ ಮೂಲಕ ಭಾ.ದಂ.ಸಂ.ಕಲಂ. 324 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

3. ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಅದೇ ವಿಚಾರವಾಗಿ 26ನೇ ಆರೋಪಿತನು ಉಳಿದ ಆರೋಪಿತರೊಂದಿಗೆ ಸೇರಿ ಚಾಸಾ-1 ಮತ್ತು ಚಾಸಾ-4 ರಿಂದ 15 ರವರಿಗೆ ಕರ್ತವ್ಯವನ್ನು ನಿರ್ವಹಿಸುವುದನ್ನು ತಪ್ಪಿಸುವ ಅಥವಾ ಅದನ್ನು ಮಾಡದಂತೆ ಬೆದರಿಸುವ ಉದ್ದೇಶದಿಂದ ಕಲ್ಲು ತೊರಾಟ ನಡೆಸಿ ಚಾಸಾ-1 ರವರಿಗೆ ಸಾದಾ ಸ್ವರೂಪದ ಗಾಯ ಉಂಟಾಗುವಂತೆ ಮಾಡುವ ಮೂಲಕ ಚಾಸಾ-1 ಮತ್ತು ಚಾಸಾ-4 ರಿಂದ 15 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿ ಆ ಮೂಲಕ ಭಾ.ದಂ.ಸಂ.ಕಲಂ. 332 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

4. ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಅದೇ ವಿಚಾರವಾಗಿ 26ನೇ ಆರೋಪಿತನು ಉಳಿದ ಆರೋಪಿತರೊಂದಿಗೆ ಸೇರಿ ಚಾಸಾ-1 ಮತ್ತು ಚಾಸಾ-4 ರಿಂದ 15 ರವರಿಗೆ ಕರ್ತವ್ಯವನ್ನು ನಿರ್ವಹಿಸುವುದನ್ನು ತಪ್ಪಿಸುವ ಅಥವಾ ಅದನ್ನು ಮಾಡದಂತೆ ಬೆದರಿಸುವ ಉದ್ದೇಶದಿಂದ ಕಲ್ಲು ತೂರಾಟ ನಡೆಸಿ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿ ಆ ಮೂಲಕ ಭಾ.ದಂ.ಸಂ.ಕಲಂ. 353

ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

5. ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಅದೇ ವಿಚಾರವಾಗಿ 26ನೇ ಆರೋಪಿತನು ಉಳಿದ ಆರೋಪಿತರೊಂದಿಗೆ ಸೇರಿ ಅಕ್ರಮಕೂಟವನ್ನು ರಚಿಸಿಕೊಂಡು ಚಾಸಾ-1 ಮತ್ತು ಚಾಸಾ-4 ರಿಂದ 15 ರವರನ್ನು ಕರ್ತವ್ಯ ನಿರ್ವಹಿಸದಂತೆ ಅಕ್ರಮವಾಗಿ ತಡೆದು ನಿಲ್ಲಿಸಿದ ಕಾರಣ ಭಾ.ದಂ.ಸಂ.ಕಲಂ.341 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

6. ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಅದೇ ವಿಚಾರವಾಗಿ 26ನೇ ಆರೋಪಿತನು ಉಳಿದ ಆರೋಪಿತರೊಂದಿಗೆ ಸೇರಿ ಅಕ್ರಮ ಕೂಟವನ್ನು ರಚಿಸಿಕೊಂಡು ಚಾಸಾ-1 ಮತ್ತು ಚಾಸಾ-4 ರಿಂದ 15 ರವರ ಮೇಲೆ ಕಲ್ಲು ತೂರಾಟ ನಡೆಸಿ ದೊಂಬಿ ಉಂಟುಮಾಡಿದ್ದಕ್ಕಾಗಿ ಭಾ.ದಂ.ಸಂ.ಕಲಂ. 148 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

7. ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಅದೇ ವಿಚಾರವಾಗಿ 26ನೇ ಆರೋಪಿತನು ಉಳಿದ ಆರೋಪಿತರೊಂದಿಗೆ ಸೇರಿ ಮೇಲೆ ವಿವರಿಸಿದ ಅಪರಾಧಗಳನ್ನು ಎಸಗುವ ಸಂದರ್ಭದಲ್ಲಿ ವಿಧಿವಿರುದ್ದ ಕೂಟದ ಸದಸ್ಯರಾಗಿರುವುದರಿಂದ ಭಾ.ದಂ.ಸಂ.ಕಲಂ. 143 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

8. ಯಾವ ಆದೇಶ ಅಥವಾ ಶಿಕ್ಷೆ?

8. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆ:

| | |
|---|---|
| ಅಂಶ ನಂ.1 ರಿಂದ 7 : | ನಕರಾತ್ಮಕವಾಗಿ. |
| ಅಂಶ ನಂ.8: | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

**ಕಾ ರ ಣ ಗ ಳು**

9. **ಅಂಶ ನಂ.1 ರಿಂದ 7:-** ಸದರಿ ಎಲ್ಲಾ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

10. ಈ ಪ್ರಕರಣದಲ್ಲಿ ಅಭಿಯೋಜನೆಯು 26ನೇ ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾಸಾ-1 ಮಂಜುನಾಥ ಕುಸುಗಲ್ ಪಿ.ಎಸ್.ಐ ಇವರನ್ನು ಪಿ.ಡಬ್ಲ್ಯೂ-7 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ-7 ರವರು ಈ ಪ್ರಕರಣದ ಫಿರ್ಯಾದಿ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 08.05.2010 ರಂದು ನಡೆದ ಗ್ರಾಂ.ಪಂ. ಚುನಾವಣಾ ಮತದಾನ ನಡೆದು ದಿನಾಂಕಃ 17.05.2010 ರಂದು ಅಫಜಲಪೂರ ತಾಲೂಕಿನ ಗ್ರಾಂ.ಪಂ. ಗಳ ಮತ ಎಣಿಕೆ ಬಂದೋಬಸ್ತ ಕರ್ತವ್ಯಕ್ಕೆ ಅಫಜಲಪೂರ ಸಿ.ಪಿ.ಐ ರವರು ನೇಮಿಸಿದ ಮೇರೆಗೆ ಅಫಜಲಪೂರ ಪಟ್ಟಣದಲ್ಲಿರುವ ಮಹಾಂತೇಶ್ವರ ವಿದ್ಯಾವರ್ಧಕ ಕಾಲೇಜಿನಲ್ಲಿ ಮತ ಎಣಿಕೆ ಬಂದೋಬಸ್ತ ಕರ್ತವ್ಯಕ್ಕೆ ಸದರಿ ಕಾಲೇಜಿನ ಮುಖ್ಯದ್ವಾರದ ಗೇಟಿನ ಹತ್ತಿರ ತನಗೆ ಮತ್ತು ರೇವೂರ ಠಾಣೆಯ ಹೆಚ್.ಸಿ-222, ಅಫಜಲಪೂರ ಠಾಣೆಯ ಹೆಚ್.ಸಿ-246,

DGPS ಠಾಣೆಯ ಪಿ.ಸಿ-1599, 1461, 1420, 1416, 1498, 1735, 31, 1341, 1344 ಹಾಗೂ ಅಫಜಲಪೂರ MPC-194 ರವರೊಂದಿಗೆ ಸದರಿ ಬಂದೋಬಸ್ತ ಕರ್ತವ್ಯಕ್ಕೆ ಹಾಜರಾಗಿರುತ್ತೇವೆ ಎಂದು ಹಾಗೂ ದಿನಾಂಕಃ 17.05.2010 ರಂದು ಬೆಳಿಗ್ಗೆ 07-00 ಗಂಟೆಗೆ ಸದರಿ ಕಾಲೇಜಿನ ಮುಖ್ಯದ್ವಾರದ ಬಳಿ ತಾನು ಹಾಗೂ ಮೇಲೆ ತಿಳಿಸಿದ ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗಿದ್ದು, ಮುಂಜಾನೆ 8-00 ಗಂಟೆ ಸುಮಾರಿಗೆ ಧ್ವನಿವರ್ಧಕದ ಮುಖಾಂತರ ಮತ ಎಣಿಕೆಯ ಹಾಗೂ ಮತಪೆಟ್ಟಿಗೆಗಳ ಮಾಹಿತಿಯನ್ನು ನಿಗದಿತ ಅವಧಿಗೆ ನೀಡಲಾಗುತ್ತಿತ್ತು. ತಾನು ಮತ್ತು ಸಿಬ್ಬಂದಿ ವರ್ಗದವರು ಗೇಟಿನ ಮುಖಾಂತರ ಹೋಗುತ್ತಿರುವ ಏಜೆಂಟರಿಗೆ ಹಾಗೂ ಅಭ್ಯರ್ಥಿಗಳ ಗುರುತಿನ ಚೀಟಿ ಪರೀಕ್ಷಿಸುತ್ತಿದ್ದೆವು. ಸುಮಾರು 8-30 ಗಂಟೆಗೆ ಬಹಳಷ್ಟು ಜನರು ಮುಖ್ಯದ್ವಾರದ ಬಳಿ ಸೇರಿ ಧ್ವನಿವರ್ಧಕದಿಂದ ಸರಿಯಾದ ಮಾಹಿತಿ ಕೇಳುಸುತ್ತಿಲ್ಲವೆಂದು ಜನರು ಕೂಡಾಗುತ್ತಾ ಗಲಾಟೆ ಮಾಡುತ್ತಿದ್ದರು ಎಂದು ಆಗ ತಾನು ಮತ್ತು ಸಿಬ್ಬಂದಿ ಜನರು ಸೇರಿ ಗಲಾಟೆ ಮಾಡಬೇಡಿರಿ ಚುನಾವಣಾಧಿಕಾರಿಗೆ ವಿಷಯ ತಿಳಿಸಿ ಧ್ವನಿವರ್ಧಕದ ಸರಿಯಾದ ವ್ಯವಸ್ಥೆ ಮಾಡಿಕೊಡಿಸುವುದಾಗಿ ಹೇಳುತ್ತಿದ್ದಾಗ ಎಲ್ಲರೂ ಸೇರಿ "ಏ ಬೋಸುಡಿ ಮಕ್ಕಳೆ ಒಳಗಡೆ ಬಿಡುತ್ತಿರ ಇಲ್ಲ" ಎಂದು ಗಲಾಟೆ ಮಾಡುತ್ತಾ ಮುಖ್ಯದ್ವಾರದ ಗೇಟನ್ನು ಒತ್ತಿ ಎಲ್ಲರೂ ಒಳಗೆ ನುಗ್ಗಿದರು. ಜನರು ಮತ ಎಣಿಕೆ ಕೇಂದ್ರಕ್ಕೆ ನುಗ್ಗಿ ಮತಪೆಟ್ಟಿಗೆ ಹಾನಿ ಮಾಡಿ ತೊಂದರೆ ಮಾಡಬಹುದು ಎಂಬ ಮುಂದಾಲೋಚನೆಯಿಂದ ತಾನು ಮತ್ತು ಸಿಬ್ಬಂದಿಯವರು ಮುಖ್ಯದ್ವಾರದಿಂದ ಹೊರಗೆ ಹಾಕಲು ಪ್ರಯತ್ನಿಸಿದಾಗ ಹೂರಗಿನಿಂದ ಎಸೆದ ಕಲ್ಲು ತನ್ನ ತಲೆಯ ಹಿಂಭಾಗದಲ್ಲಿ ಬಡೆದು ರಕ್ತಗಾಯವಾಗಿರುತ್ತದೆ ಎಂದು ಅದರಂತೆ ಚಾಸಾ-4 ಮತ್ತು 5

ರವರಿಗೂ ಸಹ ಕಲ್ಲುಗಳು ಬಡಿದಿರುತ್ತವೆ. ಸದರಿ ಘಟನೆಯಲ್ಲಿ ಅಂದಾಜು 50-60 ಜನ ಭಾಗಿಯಾಗಿದ್ದರು. ಸದರಿ ಘಟನೆಯಲ್ಲಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತನು ಸಹ ಇತರ ಆರೋಪಿತರೊಂದಿಗೆ ಅಪರಾಧವೆಸಗಲು ಭಾಗಿಯಾಗಿದ್ದನು. ಈ ಘಟನೆಯಲ್ಲಿ ನಮಗಾದ ಗಾಯಗಳು ಉಪಚಾರಕ್ಕೆಂದು ತಾನು ಪಿ.ಸಿ-1420, 1461 ರವರೊಂದಿಗೆ ಸರಕಾರಿ ಆಸ್ಪತ್ರೆ ಅಫಜಲಪೂರದಲ್ಲಿ ಒಂದು ಚಿಕಿತ್ಸೆ ಪಡೆದುಕೊಂಡು, ಆನಂತರ ಘಟನೆ ಕುರಿತು ಅಫಜಲಪೂರ ಠಾಣೆಯಲ್ಲಿ ಪ್ರಕರಣ ದಾಖಲಿಸಿರುತ್ತೇನೆಂದು ಹಾಗೂ ದಿನಾಂಕಃ 18.05.2010 ರಂದು ಮಾನ್ಯ ಸಿ.ಪಿ.ಐ ರವರು ಮಾಡಿದ ಘಟನಾ ಸ್ಥಳದ ಪಂಚನಾಮೆಯನ್ನು ತಾನು ತೋರಿಸಿದ್ದು ಪಂಚನಾಮೆ ಜರುಗಿಸಿ ಸ್ಥಳದಿಂದ ಹಲ್ಲೆಗೆ ಬಳಸಿದ ನಾಲ್ಕು ಕಲುಗಳನ್ನು ತನ್ನ ಸಮಕ್ಷಮ ಚಾಸಾ-23 ರವರು ಜಪ್ತಿಪಡಿಸಿಕೊಂಡಿರುತ್ತಾರೆಂದು ಹಾಗೂ ದಿನಾಂಕಃ27.04.2011 ರಂದು ಮಾನ್ಯ ಸಿ.ಪಿ.ಐ ರವರು ಮಾಡಿದ ತನಿಖೆಯಲ್ಲಿ ಒಟ್ಟು 36 ಜನ ಅಪರಾಧದಲ್ಲಿ ಭಾಗಿಯಾಗಿರುತ್ತಾರೆಂದು ಕಂಡುಬಂದಿದ್ದರಿಂದ ಈ ಕುರಿತು ತಾನು ಪುರವಣಿ ಹೇಳಿಕೆಯನ್ನು ನೀಡಿರುವುದಾಗಿ ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

11. ಈ ಪ್ರಕರಣದಲ್ಲಿ ಅಭಿಯೋಜನೆಯು 26ನೇ ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾಸಾ-6 ಧರೆಪ್ಪ ತಂದೆ ಶಂಕರಗೌಡ ಬಿರಾದಾರ ಹೆಚ್.ಸಿ.532, ಇವರನ್ನು ಪಿ.ಡಬ್ಲ್ಯೂ -1 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ -1 ರವರು ಈ ಪ್ರಕರಣದ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 17.05.2010 ರಂದು ಅಫಜಲಪೂರ ತಾಲೂಕಿನ ಗ್ರಾ.ಪಂ. ಗಳ ಮತ ಎಣಿಕೆ ಬಂದೋಬಸ್ತ ಸಲುವಾಗಿ ಅಫಜಲಪೂರ ಪಟ್ಟಣದಲ್ಲಿರುವ ಮಹಾಂತೇಶ್ವರ

ವಿದ್ಯಾ ವರ್ಧಕ ಕಾಲೇಜಿನಲ್ಲಿ ಮತ ಎಣಿಕೆ ಬಂದೋಬಸ್ತ ಕರ್ತವ್ಯಕ್ಕೆ ಸದರಿ ಕಾಲೀಜಿನ ಮುಖ್ಯದ್ವಾ ರದ ಗೇಟಿನ ಹತ್ತಿರ ಚಾಸಾ-1 ರವರ ಜೊತೆಗೆ ತನಗೆ ಮತ್ತು ರೇವೂರ ಠಾಣೆಯ ಹೆಚ್.ಸಿ-222, ಅಫಜಲಪೂರ ಠಾಣೆಯ ಹಾಗೂ ರೇವೂರ ಠಾಣೆಯ ಸಿಬ್ಬಂದಿ ಅಂದಾಜು 10-ಜನ ಬಂದೋಬಸ್ತ ಕರ್ತವ್ಯಕ್ಕೆ ಹಾಜರಾಗಿರುತ್ತೇವೆ ಎಂದು ಹಾಗೂ ಮುಂಜಾನೆ 8-30 ಗಂಟೆಗೆ ಮತ ಎಣಿಕೆ ಮಾಹಿತಿ ಧ್ವನಿವರ್ಧಕದ ಮೂಲಕ ಸರಿಯಾಗಿ ಕೇಳುತ್ತಿಲ್ಲ ಎಂದು ಸಾಕಷ್ಟು ಜನ ಮತ ಎಣಿಕೆ ಕೇಂದ್ರಕ್ಕೆ ನುಗ್ಗಲು ಪ್ರಯತ್ನಿಸಿದಾಗ ಹೊರಗಿನಿಂದ ಬೀಸಿ ಹೊಡೆದ ಕಲ್ಲು ಚಾಸಾ-1 ರವರ ತಲೆಯ ಹಿಂಭಾಗದಲ್ಲಿ, ಚಾಸಾ-5 ರವರ ಬೆನ್ನಿಗೆ , ಚಾಸಾ-4 ರವರ ಗಲ್ಲಕ್ಕೆ ಬಡೆದಿದ್ದು, ಏ ಬೋಸಡಿ ಮಕ್ಕಳೆ ಗೇಟ್ ತೆಗಿರಿ ನಾವು ಒಳಗಡೆ ಹೋಗಬೇಕು ಎಂದು ಅವಾಚ್ಯ ಶಬ್ದಗಳಿಂದ ಕೂಡ ಬೈದಾಡುತ್ತಿದ್ದರೆಂದು ಹಾಗೂ ಘಟನೆ ಸಮಯದಲ್ಲಿ ಸಾಕಷ್ಟು ಜನರು ಸೇರಿದ್ದರಿಂದ ಯಾರು ಕಲ್ಲು ಒಗೆದಿರುತ್ತಾರೆಂದು ಗುರುತಿಸಲು ಆಗಿಲ್ಲ ಎಂದು ಸಾಕ್ಷಿ ಮೂಲ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಒ-1 ರಿಂದ 4 ಎಂದು ಗುರುತಿಸಲಾಗಿದ್ದು, ಆದರೆ ಘಟನೆ ಸಮಯದಲ್ಲಿ ಆರೋಪಿತರು ಕೂಡ ಇರಬಹುದು ಆದರೆ ಖಚಿತವಾಗಿ ಹೇಳಲು ಬರುವುದಿಲ್ಲವೆಂದು ಹಾಗೂ ಘಟನೆಯಾದ ನಂತರ ಚಾಸಾ-1, ಚಾಸಾ-4 ಮತ್ತು 5 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಈ ಕುರಿತು ಚಾಸಾ-1 ರವರು ಪ್ರಕರಣ ದಾಖಲಿಸಿದ್ದು, ಹಾಗೂ ಈ ಘಟನೆ ಕುರಿತು ಹೇಳಿಕೆ ನೀಡಿರುತ್ತೇನೆಂದು ಹಾಗೂ ಘಟನೆ ಕುರಿತು ಪುರವಣಿ ಹೇಳಿಕೆ ನೀಡಿಲ್ಲವೆಂದು ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

12. ಈ ಪ್ರಕರಣದಲ್ಲಿ ಅಭಿಯೋಜನೆಯು 26ನೇ ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾಸಾ-4 ಪ್ರಕಾಶ ಮೈದರಗಿ ತಂದೆ ವೀರಭದ್ರಪ್ಪ ಪಿ.ಸಿ.1672 ಇವರನ್ನು ಪಿ.ಡಬ್ಲ್ಯೂ-2 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ-2 ರವರು ಈ ಪ್ರಕರಣದ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 17.05.2010 ರಂದು ಅಫಜಲಪೂರ ತಾಲೂಕಿನ ಗ್ರಾ.ಪಂ. ಗಳ ಮತ ಎಣಿಕೆ ಬಂದೋಬಸ್ತ ಸಲುವಾಗಿ ಅಫಜಲಪೂರ ಪಟ್ಟಣದಲ್ಲಿರುವ ಮಹಾಂತೇಶ್ವರ ವಿದ್ಯಾವರ್ಧಕ ಕಾಲೇಜಿನಲ್ಲಿ ಮತ ಎಣಿಕೆ ಬಂದೋಬಸ್ತ ಕರ್ತವ್ಯಕ್ಕೆ ಸದರಿ ಕಾಲೇಜಿನ ಮುಖ್ಯ ದ್ವಾರದ ಗೇಟಿನ ಹತ್ತಿರ ಚಾಸಾ-1 ರವರ ಜೊತೆಗೆ ತಾನು ಮತ್ತು ಚಾಸಾ-5 ರಿಂದ 15 ರವರು ಬಂದೋಬಸ್ತ ಕರ್ತವ್ಯಕ್ಕೆ ಹಾಜರಾಗಿರುತ್ತೇವೆ. ಮುಂಜಾನೆ 8-30 ಗಂಟೆಗೆ ಮತ ಎಣಿಕೆ ಮಾಹಿತಿ ಧ್ವನಿವರ್ಧಕದ ಮೂಲಕ ಸರಿಯಾಗಿ ಕೇಳುತ್ತಿಲ್ಲ ಎಂದು ಸಾಕಷ್ಟು ಜನ ಮತ ಎಣಿಕೆ ಕೇಂದ್ರಕ್ಕೆ ನುಗ್ಗಲು ಪ್ರಯತ್ನಿಸಿದಾಗ ಹೊರಗಿನಿಂದ ಬೀಸಿ ಹೊಡೆದ ಕಲ್ಲು ಚಾಸಾ-1 ರವರ ತಲೆಯ ಹಿಂಭಾಗದಲ್ಲಿ, ಚಾಸಾ-5 ರವರ ಬೆನ್ನಿಗೆ , ತನ್ನ ಬಲ ಗಲ್ಲಕ್ಕೆ ಬಡೆದಿದ್ದು, ಏ ಬೋಸಡಿ ಮಕ್ಕಳೆ ಗೇಟ್ ತೆಗಿರಿ ನಾವು ಒಳಗಡೆ ಹೋಗಬೇಕು ಎಂದು ಅವಾಚ್ಯ ಶಬ್ದಗಳಿಂದ ಕೂಡ ಬೈದಾಡುತ್ತಿದ್ದರೆಂದು ಹಾಗೂ ಘಟನೆ ಸಮಯದಲ್ಲಿ ಸಾಕಷ್ಟು ಜನರು ಸೇರಿದ್ದರಿಂದ ಯಾರು ಕಲ್ಲು ಒಗೆದಿರುತ್ತಾರೆಂದು ಗುರುತಿಸಲು ಆಗಲಿಲ್ಲ, ಆದರೆ ಸದರಿ ಗಲಾಟೆಯಲ್ಲಿ ಆರೋಪಿತರು ಕೂಡ ಹಾಜರಿದ್ದರು. ಆನಂತರ ಪೊಲೀಸ್‌ಬಾತ್ಮಿದಾರರಿಂದ ಆರೋಪಿತರು ಹೆಸರು ವಿಳಾಸಗಳನ್ನು ಕೇಳಿ ತಿಳಿದುಕೊಂಡಿರುತ್ತೇನೆಂದು ಹಾಗೂ ತಾನು ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು, ಮೂಲ ಪ್ರಕರಣದಲ್ಲಿ

ಅವುಗಳನ್ನು ಈಗಾಗಲೇ ಎಂ.ಓ-1 ರಿಂದ 4 ಎಂದು ಗುರುತಿಸಲಾಗಿದ್ದು, ಘಟನೆಯಾದ ನಂತರ ತನ್ನನ್ನು ಹಾಗೂ ಚಾಸಾ-1 ಮತ್ತು ಚಾಸಾ-5 ರವರನ್ನು ಅಫಜಲಪೂರ ಸರಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆಂದು ಹಾಗೂ ಈ ಕುರಿತು ಚಾಸಾ-1 ರವರು ಪ್ರಕರಣ ದಾಖಲಿಸಿದ್ದು, ಘಟನೆ ಕುರಿತು ಹೇಳಿಕೆ ಹಾಗೂ ಪುರವಣಿ ಹೇಳಿಕೆ ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ.

13. ಈ ಪ್ರಕರಣದಲ್ಲಿ ಅಭಿಯೋಜನೆಯು 26ನೇ ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾಸಾ-5 ನಾಗರಾಜ ಮಾಡಿಯಾಳ ತಂದೆ ಶರಣಪ್ಪ ಹೆಚ್.ಸಿ-386 ಇವರನ್ನು ಪಿ.ಡಬ್ಲ್ಯೂ -3 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ -3 ರವರು ಈ ಪ್ರಕರಣದ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 17.05.2010 ರಂದು ಅಫಜಲಪೂರ ತಾಲೂಕಿನ ಗ್ರಾ.ಪಂ. ಗಳ ಮತ ಎಣಿಕೆ ಬಂದೋಬಸ್ತ ಸಲುವಾಗಿ ಅಫಜಲಪೂರ ಪಟ್ಟಣದಲ್ಲಿರುವ ಮಹಾಂತೇಶ್ವರ ವಿದ್ಯಾ ವರ್ಧಕ ಕಾಲೇಜಿನಲ್ಲಿ ಮತ ಎಣಿಕೆ ಬಂದೋಬಸ್ತ ಕರ್ತವ್ಯಕ್ಕೆ ಸದರಿ ಕಾಲೇಜಿನ ಮುಖ್ಯ ದ್ವಾ ರದ ಗೇಟಿನ ಹತ್ತಿರ ಚಾಸಾ-1 ರವರ ಜೊತೆಗೆ ತನಗೆ ಮತ್ತು ಚಾಸಾ-4, ಚಾಸಾ-6 ರಿಂದ 15 ರವರು ಬಂದೋಬಸ್ತ ಕರ್ತವ್ಯಕ್ಕೆ ಹಾಜರಾಗಿರುತ್ತೇವೆ. ಮುಂಜಾನೆ 8-30 ಗಂಟೆಗೆ ಮತ ಎಣಿಕೆ ಮಾಹಿತಿ ಧ್ವನಿವರ್ಧಕದ ಮೂಲಕ ಸರಿಯಾಗಿ ಕೇಳುತ್ತಿಲ್ಲ ಎಂದು ಸಾಕಷ್ಟು ಜನ ಮತ ಎಣಿಕೆ ಕೇಂದ್ರಕ್ಕೆ ನುಗ್ಗಲು ಪ್ರಯತ್ನಿಸಿದಾಗ ಹೊರಗಿನಿಂದ ಬೀಸಿ ಹೊಡೆದ ಕಲ್ಲು ಚಾಸಾ-1 ರವರ ತಲೆಯ ಹಿಂಭಾಗದಲ್ಲಿ, ತನ್ನ ಬೆನ್ನಿಗೆ, ಚಾಸಾ-4 ರವರ ಬಲ ಗಲ್ಲಕ್ಕೆ ಬಡೆದಿದ್ದು, ಏ ಬೋಸಡಿ ಮಕ್ಕಳೆ ಗೇಟ್ ತೆಗಿರಿ ನಾವು ಒಳಗಡೆ ಹೋಗಬೇಕು ಎಂದು ಅವಾಚ್ಯ ಶಬ್ದಗಳಿಂದ ಕೂಡ ಬೈದಾಡುತ್ತಿದ್ದರೆಂದು ಹಾಗೂ

ಘಟನೆ ಸಮಯದಲ್ಲಿ ಸಾಕಷ್ಟು ಜನರು ಸೇರಿದ್ದರಿಂದ ಯಾರು ಕಲ್ಲು ಒಗೆದಿರುತ್ತಾರೆಂದು ಗುರುತಿಸಲು ಆಗಲಿಲ್ಲ, ಆದರೆ ಸದರಿ ಗಲಾಟೆಯಲ್ಲಿ ಆರೋಪಿತರೂ ಕೂಡ ಹಾಜರಿದ್ದರು. ಆನಂತರ ಪೊಲೀಸ್ ಬಾತ್ಮಿದಾರರಿಂದ ಆರೋಪಿತರ ಹೆಸರು ವಿಳಾಸಗಳನ್ನು ಕೇಳಿ ತಿಳಿದುಕೊಂಡಿರುತ್ತೇನೆಂದು ಹಾಗೂ ತಾನು ಈ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮೂಲ ಪ್ರಕರಣದಲ್ಲಿ ಈಗಾಗಲೇ ಎಂ.ಒ-1 ರಿಂದ 4 ಎಂದು ಗುರುತಿಸಲಾಗಿದೆ. ಘಟನೆಯಾದ ನಂತರ ತನ್ನನ್ನು ಹಾಗೂ ಚಾಸಾ-1 ಮತ್ತು 4 ರವರನ್ನು ಅಫಜಲಪೂರ ಸರಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆಂದು ಹಾಗೂ ಈ ಕುರಿತು ಚಾಸಾ-1 ರವರು ಪ್ರಕರಣ ದಾಖಲಿಸಿದ್ದು, ಘಟನೆ ಕುರಿತು ಹೇಳಿಕೆ ಹಾಗೂ ಪುರವಣಿ ಹೇಳಿಕೆ ನೀಡಿರುತ್ತೇನೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

14. ಈ ಪ್ರಕರಣದಲ್ಲಿ ಅಭಿಯೋಜನೆಯು 26ನೇ ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾಸಾ-7 ಸಂಜಯ ಪಾಟೀಲ ತಂದೆ ಸುಭಾಷ್ಚಂದ್ರ ಪಿ.ಸಿ.1085 ಇವರನ್ನು ಪಿ.ಡಬ್ಲ್ಯೂ-4 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ-4 ರವರು ಈ ಪ್ರಕರಣದ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 17.05.2010 ರಂದು ಅಫಜಲಪೂರ ತಾಲೂಕಿನ ಗ್ರಾ.ಪಂ. ಗಳ ಮತ ಎಣಿಕೆ ಬಂದೋಬಸ್ತ ಸಲುವಾಗಿ ಅಫಜಲಪೂರ ಪಟ್ಟಣದಲ್ಲಿರುವ ಮಹಾಂತೇಶ್ವರ ವಿದ್ಯಾ ವರ್ಧಕ ಕಾಲೇಜಿನಲ್ಲಿ ಮತ ಎಣಿಕೆ ಬಂದೋಬಸ್ತ ಕರ್ತವ್ಯಕ್ಕೆ ಸದರಿ ಕಾಲೇಜಿನ ಮುಖ್ಯದ್ವಾರದ ಗೇಟಿನ ಹತ್ತಿರ ಚಾಸಾ-1 ರವರ ಜೊತೆ ತಾನು ಹಾಗೂ ಇನ್ನೂ 8-ಜನ ಸಿಬ್ಬಂದಿಗಳು ಬಂದೋಬಸ್ತ ಕರ್ತವ್ಯಕ್ಕೆ ಹಾಜರಾಗಿರುತ್ತೇವೆ. ಮುಂಜಾನೆ 8-30 ಗಂಟೆಗೆ

ಮತ ಎಣಿಕೆ ಮಾಹಿತಿ ಧ್ವನಿವರ್ಧಕದ ಮೂಲಕ ಸರಿಯಾಗಿ ಕೇಳುತ್ತಿಲ್ಲ ಎಂದು ಸಾಕಷ್ಟು ಜನ ಮತ ಎಣಿಕೆ ಕೇಂದ್ರಕ್ಕೆ ನುಗ್ಗಲು ಪ್ರಯತ್ನಿಸಿದಾಗ ಹೊರಗಿನಿಂದ ಬೀಸಿ ಹೊಡೆದ ಕಲ್ಲು ಚಾಸಾ-1 ರವರ ತಲೆಯ ಹಿಂಭಾಗದಲ್ಲಿ, ಚಾಸಾ-5 ರವರ ಬೆನ್ನಿಗೆ, ಚಾಸಾ-4 ರವರ ಗಲ್ಲಕ್ಕೆ ಬಡೆದಿದ್ದು, ಏ ಬೋಸಡಿ ಮಕ್ಕಳೆ ಗೇಟ್ ತೆಗಿರಿ ನಾವು ಒಳಗಡೆ ಹೋಗಬೇಕು ಎಂದು ಅವಾಚ್ಯ ಶಬ್ದಗಳಿಂದ ಕೂಡ ಬೈದಾಡುತ್ತಿದ್ದರೆಂದು ಹಾಗೂ ಘಟನೆ ಸಮಯದಲ್ಲಿ ಸಾಕಷ್ಟು ಜನರು ಸೇರಿದ್ದರಿಂದ ಯಾರು ಕಲ್ಲು ಒಗೆದಿರುತ್ತಾರೆಂದು ಗುರುತಿಸಲು ಆಗಿಲ್ಲ ಎಂದು ಹಾಗೂ ತಾನು ಈ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮೂಲ ಪ್ರಕರಣದಲ್ಲಿ ಈಗಾಗಲೇ ಎಂ.ಒ-1 ರಿಂದ 4 ಎಂದು ಗುರುತಿಸಲಾಗಿದೆ. ಘಟನೆ ಸಮಯದಲ್ಲಿ ಆರೋಪಿತರು ಕೂಡ ಇದ್ದರು. ಘಟನೆಯಾದ ನಂತರ ಚಾಸಾ-1, 4 ಮತ್ತು 5 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆನಂತರ ಪೋಲಿಸ್ ಬಾತ್ಮಿದಾರರಿಂದ ಗಲಾಟೆ ಮಾಡಿದವರ ಹೆಸರು, ವಿಳಾಸ ಗೊತ್ತಾಗಿರುತ್ತದೆ. ಈ ಕುರಿತು ಚಾಸಾ-1 ಪ್ರಕರಣ ದಾಖಲಿಸಿದ್ದು, ಘಟನೆ ಕುರಿತು ಹೇಳಿಕೆ ಹಾಗೂ ಪುರವಣಿ ಹೇಳಿಕೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

15. ಈ ಪ್ರಕರಣದಲ್ಲಿ ಅಭಿಯೋಜನೆಯು 26ನೇ ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾಸಾ-3 ಗುರಪ್ಪ ಬಟಗೇರಿ ತಂದೆ ಶಾಂತಪ್ಪ, ಇವರನ್ನು ಪಿ.ಡಬ್ಲ್ಯೂ-5 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ-5 ರವರು ಈ ಪ್ರಕರಣದ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ಪರಿಚಯವಿಲ್ಲ. ಈಗ ತಾನು ನೋಡುತ್ತಿರುವ ದಾಖಲೆ ಮೇಲಿನ ಸಹಿ ತನ್ನದೇ ಇರುತ್ತದೆ. ಪಂಚನಾಮೆ

ಮೇಲಿನ ಸಾಕಿ ಸಹಿಯನ್ನು ಗುರುತಿಸಿದ್ದು ಪಂಚನಾಮೆಯನ್ನು ನಿಶಾನೆ ಪಿ-2, ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಶಾನೆ ಪಿ-2(ಎ) ಎಂದು ಗುರುತಿಸಲಾಯಿತ. ಅದರಂತೆ ಮುದ್ದೇಮಾಲುಗಳ ಮೇಲಿನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮೂಲ ಪ್ರಕರಣ ಸಿಸಿ ನಂ.131/2011 ರಲ್ಲಿ ಎಂ.ಓ-1ಎ ದಿಂದ 4ಎ ಎಂದು ಗುರುತಿಸಲಾಗಿದೆ. ತನ್ನ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಮಾಡಿ ಮುದ್ದೇಮಾಲುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಪೋಲಿಸರ ಕೋರಿಕೆ ಮೇರೆಗೆ ಪಂಚನಾಮೆ ಸಹಿ ಮಾಡಿರುತ್ತೇನೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

16. ಈ ಪ್ರಕರಣದಲ್ಲಿ ಅಭಿಯೋಜನೆಯು 26ನೇ ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾಸಾ-23 ರಮೇಶ ತಂದೆ ಚಂದಪ್ಪ ನಿವೃತ್ತ ಸಿ.ಪಿ.ಐ ಇವರನ್ನು ಪಿ.ಡಬ್ಲೂ -6 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲೂ -6 ರವರು ಈ ಪ್ರಕರಣದ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 17.05.2010 ರಂದು ಗ್ರಾಮ ಪಂಚಾಯತಿ ಚುನಾವಣೆ ಮತ ಎಣಿಕೆ ನಿಮಿತ್ಯ ಮಹಾಂತೇಶ್ವರ ವಿಧ್ಯಾವರ್ದಕ ಶಿಕ್ಷಣ ಸಂಸ್ಥೆಯಲ್ಲಿ ಬೆಳಿಗ್ಗೆ ಸಿಬ್ಬಂದಿಗಳ ರೋಲಕಾಲ ತೆಗೆದುಕೊಂಡು ಸಿಬ್ಬಂದಿಗಳನ್ನು ಆಯಾ ಕರ್ತವ್ಯಕ್ಕೆ ನಿಯೋಜನೆ ಮಾಡಿರುತ್ತೇನೆಂದು ಹಾಗೂ ಸದರಿ ಸಂಸ್ಥೆಯ ಮುಖ್ಯದ್ವಾರದಲ್ಲಿ HC-332, 246, PC-1559, 1461, 1420,1498, 1416, 1344,1341, 735, 31, WPC-194 ರವರನ್ನು ಮುಖ್ಯದ್ವಾರದ ಬಳಿ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಸದರಿಯವರುಗಳಿಗೆ ಗ್ರಾಮ ಪಂಚಾಯತಿ ಚುನಾವಣೆ ಅಭ್ಯರ್ಥಿ ಮತ್ತು ಅವರ ಏಜೆಂಟುಗಳ ಗುರುತಿನ ಚೀಟಿ ಪರಿಶೀಲಿಸಿ ಒಳಗಡೆ ಬಿಡಲು ಮಾರ್ಗಸೂಚಿ ನೀಡಲಾಗಿತ್ತು. ಬೆಳಿಗ್ಗೆ 8 ರಿಂದ 8-25

ರವರೆಗೆ ಸುವ್ಯವಸ್ಥೆಯಾಗಿ ಕರ್ತವ್ಯ ನಡೆದಿತು. ಸುಮಾರು 8-30 ಗಂಟೆಗೆ ಅಲ್ಲಿ ಕೆಲವು ಗುಂಪಿನ ಜನರು ತಮಗೆ ಎಣಿಕೆ ಸರಿಯಾಗಿ ಕೇಳಿಸುತ್ತಿಲ್ಲ ಅದಕ್ಕಾಗಿ ಧ್ವನಿವರ್ಧಕದ ಧ್ವನಿಯನ್ನು ಹೆಚ್ಚಿಸಲು ಜೋರಾಗಿ ಕೂಗಾಟ ಮಾಡುತ್ತಿದ್ದರು. ಆಗ ತಾವು ತಾಲೂಕ ತಹಶೀಲ್ದಾರ ರವರಿಗೆ ಸದರಿ ವಿಷಯ ತಿಳಿಸಿ ಧ್ವನಿವರ್ದಕ ಧ್ವನಿ ಹೆಚ್ಚಿಸಿದೆವು. ಆದರೂ ಕೂಡಾ ಸದರಿ ಗುಂಪಿನವರು ಸರಿಯಾಗಿ ಕೇಳಿಸುತ್ತಿಲ್ಲ ಎಂದು ದಂಗೆ ಪ್ರಾರಂಭಿಸಿದರು. ಆಗ ಚಾಸಾ-1, ಅವರು ನೇಮಿಸಿದ ಸಿಬ್ಬಂದಿಗಳು ಸದರಿ ಗುಂಪಿನ ಸದಸ್ಯರಿಗೆ ಮತ್ತು ಸಾರ್ವಜನಿಕರಿಗೆ ತಿಳುವಳಿಕೆ ನೀಡುತ್ತಿದ್ದರು. ಆಗ ಯಾರೋ ದುಷ್ಕರ್ಮಿಗಳು ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಾ ಕಲ್ಲು ಎಸೆದಿರುವುದಾಗಿ ಸದರಿ ಎಸೆದ ಕಲ್ಲು ಚಾಸಾ-1 ರವರಿಗೆ ತಾಗಿ ತಲೆ ಹಿಂಭಾಗದಲ್ಲಿ ರಕ್ತಗಾಯವಾಗಿರುತ್ತದೆ ಮತ್ತು ಸಿಬ್ಬಂದಿಗೂ ಸಹ ಗಾಯಗಳಾಗಿದ್ದು, ನಂತರ ಸದರಿ ಗುಂಪಿನ ಜನರು ಗೇಟು ತೆಗೆದು ಆವರಣದಲ್ಲಿ ನುಗ್ಗಿದರಿಂದ ಮತ್ತು ಚುನಾವಣಾ ಮತ ಎಣಿಕೆ ಸುಗಮವಾಗಿ ಮತ್ತು ಚುನಾವಣಾ ನೀತಿ ಸಂಹಿತೆ ಪ್ರಕಾರ ಮತ ಎಣಿಕೆ ಕೇಂದ್ರದಿಂದ 100 ಮೀಟರ ಅಂತರದಲ್ಲಿ ಸಾರ್ವಜನಿಕರು ಸೇರಬಾರದು ಎಂದು ಇರುವುದರಿಂದ ಸದರಿ ಗುಂಪನ್ನು ಚೆದುರಿಸಲು ಸಾಗಲು ಲಘು ಪ್ರಹಾರ ಮಾಡಿರುವುದಾಗಿ ಸದರಿ ಗುಂಪಿನ ಜನರು ತಮ್ಮ ಕರ್ತವ್ಯಕ್ಕೆ ಅಡೆತಡೆ ಉಂಟುಮಾಡಿದರಿಂದ ಮತ್ತು ಕರ್ತವ್ಯನಿರತ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿದರಿಂದ ಈ ಪ್ರಕರಣ ದಾಖಲಿಸಿದ್ದು, ಈ ಪ್ರಕರಣ ಚಾಸಾ-1 ರವರು ನೀಡಿರುತ್ತಾರೆಂದು ಹಾಗೂ ತಾನು ಚಾಸಾ-20 ರವರಿಂದ ಈ ಪ್ರಕರಣದ ಕಡತ ಪಡೆದುಕೊಂಡು ಮುಂದಿನ ತನಿಖೆಗಾಗಿ ಚಾಸಾ-23 ರವರಿಗೆ ಸಲ್ಲಿಸಿರುವುದಾಗಿ ತನ್ನ ತನಿಖೆ ಅವಧಿಯಲ್ಲಿ ಸಿಬ್ಬಂದಿಯನ್ನು ನೇಮಿಸಿ ಸದರಿ ಘಟನೆಯಲ್ಲಿ ಭಾಗವಹಿಸಿದ ವ್ಯಕ್ತಿಗಳನ್ನು ಗುರುತಿಸಲು

ತಿಳಿಸಿರುತ್ತೇನೆಂದು ಹಾಗೂ ದಿನಾಂಕಃ 18.05.2010 ರಂದು ತಾನು ಗುನ್ನೆ ಸ್ಥಳಕ್ಕೆ ಭೇಟಿ ನೀಡಿ ಶರಣಪ್ಪ ಮತ್ತು ಗುರಪ್ಪ ಎನ್ನುವವರನ್ನು ಸ್ಥಳಕ್ಕೆ ಕರೆಸಿ ಪಂಚನಾಮೆ ವಿಷಯ ತಿಳಿಸಿ ಅವರು ಒಪ್ಪಿದರಿಂದ ಅವರು ಮತ್ತು ಚಾಸಾ-1 ರವರ ಸಮಕ್ಷಮ ಗುನ್ನೆಸ್ಥಳ ಪಂಚನಾಮೆ ಮಾಡಿ ಸಹಿ ಪಡೆದುಕೊಂಡಿರುತ್ತೇನೆಂದು ಹಾಗೂ ಗುನ್ನೆ ಸ್ಥಳದಲ್ಲಿ ಬಿದ್ದಿದ್ದ 4 ಹಿಡಿಗಾತ್ರದ ಕಲ್ಲುಗಳನ್ನು ಜಪ್ತಿಪಡಿಸಿಕೊಂಡು ಅವುಗಳಿಗೆ ಪಂಚರ ಸಹಿವುಳ್ಳ ಚೀಟಿಗಳನ್ನು ಅಂಟಿಸಿರುತ್ತೇನೆಂದು ಹಾಗೂ ಅದೇ ದಿನ ಚಾಸಾ-4 ರಿಂದ 15 ರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಾಗಿ ಆರೋಪಿತರನ್ನು ಪತ್ತೆ ಹಚ್ಚಿ ಬಂದಿಸಲು ಉಪನಿರೀಕ್ಷಕಕರ ನೇತೃತ್ವದಲ್ಲಿ ಒಂದು ತಂಡ ರಚಿಸಿರುತ್ತೇನೆಂದು ಹಾಗೂ ಸದರಿ ತಂಡದವರು ಸಲ್ಲಿಸಿದ ವರದಿಗಳನ್ನು ಕಡತಕ್ಕೆ ಅಳವಡಿಸಿಕೊಂಡು, ದಿನಾಂಕಃ 27.04.2011 ರಂದು ಚಾಸಾ-1, ಚಾಸಾ-4 ರಿಂದ 15 ರವರ ಮರು ಹೇಳಿಕೆಗಳನ್ನು ಪಡೆದುಕೊಂಡು, ಸದರಿಯವರ ಮರು ಹೇಳಿಕೆಯಲ್ಲಿ ಅವರುಗಳ ಪತ್ತೆಹಚ್ಚಿದ ಆರೋಪಿಗಳ ಹೆಸರುಗಳನ್ನು ತಿಳಿಸಿರುತ್ತಾರೆಂದು ಹಾಗೂ ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುವುದಾಗಿ ದಿನಾಂಕಃ 15.05.2011 ರಂದು ಒಟ್ಟು 36 ಜನ ಆರೋಪಿತರ ಮೇಲೆ ಪ್ರಕರಣ ದಾಖಲಿಸಿ, ಆರೋಪಿತರು ತಲೆಮರೆಸಿಕೊಂಡಿರುತ್ತಾರೆಂದು ತೋರಿಸಿ ಅಂತಿಮ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

17. ಸದರಿ ಪ್ರಕರಣದಲ್ಲಿ ಮಾನ್ಯ ಸ.ಸ.ಅ ರವರು ತಮ್ಮ ವಾದದಲ್ಲಿ ಘಟನೆಯ ದಿವಸ ಅಫಜಲಪೂರ ತಾಲೂಕಿನ ಗ್ರಾಮ ಪಂಚಾಯಿತಿಗಳ ಮತ ಎಣಿಕೆ ಬಂದೋಬಸ್ತ ಕರ್ತವ್ಯಕ್ಕೆ ಅಫಜಲಪೂರ ಮಹಾಂತೇಶ್ವರ ವಿದ್ಯಾವರ್ಧಕ ಕಾಲೇಜಿನಲ್ಲಿ ಸಿ.ಪಿ.ಐ ರವರು

ನೇಮಿಸಿದ ಮೇರೆಗೆ ಸದರಿ ಕಾಲೇಜಿನ ಮುಖ್ಯ ದ್ವಾರದ ಗೇಟಿನ ಹತ್ತಿರ ಚಾಸಾ-1 ರವರು ಮತ್ತು ರೇವೂರ ಠಾಣೆಯ ಹಾಗೂ ಅಫಜಲಪೂರ ಠಾಣೆಯ ಸಿಬ್ಬಂದಿಯವರೊಂದಿಗೆ ಸದರಿ ಬಂದೊಬಸ್ತ ಕರ್ತವ್ಯಕ್ಕೆ ಹಾಜರಾಗಿದ್ದರು. ಮುಂಜಾನೆ 08-00 ಗಂಟೆ ಸುಮಾರಿಗೆ ಧ್ವನಿವರ್ಧಕದ ಮುಖಾಂತರ ಮತ ಎಣಿಕೆಯ ಹಾಗೂ ಮತಪೆಟ್ಟಿಗೆಗಳ ಮಾಹಿತಿಯು ನಿಗದಿತ ಅವಧಿಗೆ ನೀಡಲಾಗುತ್ತಿತ್ತು. ಅವರು ಮತ್ತು ಸಿಬ್ಬಂದಿ ವರ್ಗದವರು ಗೇಟಿನ ಮುಖಾಂತರ ಹೋಗುತ್ತಿರುವ ಏಜೆಂಟರಿಗೆ ಹಾಗೂ ಅಭ್ಯರ್ಥಿಗಳ ಗುರುತಿನ ಚೀಟಿ ಪರೀಕ್ಷಿಸುತ್ತಿದ್ದರು. ಸುಮಾರು 8-30 ಗಂಟೆಗೆ ಬಹಳಷ್ಟು ಜನರು ಮುಖ್ಯ ದ್ವಾರದ ಬಳಿ ಸೇರಿ ಧ್ವನಿವರ್ಧಕದಿಂದ ಸರಿಯಾದ ಮಾಹಿತಿ ಕೇಳಿಸುತ್ತಿಲ್ಲವೆಂದು ಜನರು ಕೂಗಾಡುತ್ತಾ ಗಲಾಟೆ ಮಾಡುತ್ತಿದ್ದರು. ಆಗ ಅವರು ಮತ್ತು ಸಿಬ್ಬಂದಿ ಜನರು ಸೇರಿ ಗಲಾಟೆ ಮಾಡಬೇಡಿರಿ ಚುನಾವಣಾಧಿಕಾರಿಗೆ ವಿಷಯ ತಿಳಿಸಿ ಧ್ವನಿ ವರ್ಧಕದ ಸರಿಯಾದ ವ್ಯವಸ್ಥೆ ಮಾಡಿಕೊಡಿಸುವುದಾಗಿ ಹೇಳುತ್ತಿದ್ದಾಗ ಎಲ್ಲರೂ ಸೇರಿ "ಏ ಬೊಸಡಿ ಮಕ್ಕಳೆ" ಒಳಗಡೆ ಬಿಡುತ್ತಿರಿ ಇಲ್ಲ ಎಂದು ಗಲಾಟೆ ಮಾಡುತ್ತಾ ಮುಖ್ಯ ದ್ವಾರದ ಗೇಟನ್ನು ಒತ್ತಿ ಎಲ್ಲರೂ ಒಳಗೆ ನುಗ್ಗಿದರು. ಜನರು ಮತ ಎಣಿಕೆ ಕೇಂದ್ರಕ್ಕೆ ನುಗ್ಗಿ ಮತಪೆಟ್ಟಿಗೆ ಹಾನಿ ಮಾಡಿ ತೊಂದರೆ ಮಾಡಬಹುದು ಎಂಬ ಮುಂದಾಲೋಚನೆಯಿಂದ ಅವರು ಮತ್ತು ಸಿಬ್ಬಂದಿಯವರು ಮುಖ್ಯದ್ವಾರದಿಂದ ಹೊರಗೆ ಹಾಕಲು ಪ್ರಯತ್ನಿಸಿದಾಗ ಹೊರಗಿನಿಂದ ಎಸೆದ ಕಲ್ಲು ಚಾಸಾ 1 ರವರ ತಲೆಯ-1 ಹಿಂಭಾಗದಲ್ಲಿ ಬಡೆದು ರಕ್ತಗಾಯವಾಗಿರುತ್ತದೆ. ಅದರಂತೆ ಚಾಸಾ-4 ಮತ್ತು

ಚಾಸಾ-5 ರವರಿಗೂ ಸಹ ಕಲ್ಲುಗಳು ಬಡಿದಿರುತ್ತವೆ. ಚಾಸಾ-1 ಹಾಗೂ ಚಾಸಾ-4 ರವರಿಗೆ ಜೀವ ಬೆದರಿಕೆ ಹಾಕಿರುವುದು ಸಾಕ್ಷ್ಯಾಧಾರಗಳಿಂದ ಸಾಬೀತು ಮಾಡಿದ್ದು, ಆರೋಪಿತರಿಗೆ ಶಿಕ್ಷೆ ನೀಡುವಂತೆ ಪ್ರಾರ್ಥಿಸಿರುತ್ತಾರೆ.

18. ಆರೋಪಿತನ ಪರ ವಕೀಲರು ಅಭಿಯೋಜನೆಯ ಪ್ರಕರಣವನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ಪ್ರಾಸಾ-5 ರವರು ಸದರಿ ಪ್ರಕರಣದಲ್ಲಿ ಪ್ರತಿಕೂಲವಾಗಿ ಸಾಕ್ಷಿಯನ್ನು ನುಡಿದಿರುವುದರಿಂದ ಹಾಗೂ ಇತರೆ ಸಾಕ್ಷಿಗಳ ಹೇಳಿಕೆಗಳು ತದ್ವಿರುದ್ದವಾಗಿರುವುದರಿಂದ ಅಭಿಯೋಜನೆಯ ಸಂಶಯಾತೀತವಾಗಿ ಆರೋಪವನ್ನು ರುಜುವಾತುಪಡಿಸಿರುವುದಿಲ್ಲವೆಂದು ಆರೋಪಿತರನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಿಕೊಂಡಿರುತ್ತಾರೆ.

19. ಸಾಕ್ಷಿಗಳ ಸಾಕ್ಷ್ಯವನ್ನು ಪರಿಶೀಲನೆ ಮಾಡಿದಾಗ ಪ್ರಾಸಾ-3 ರಿಂದ 6 ರವರು ತಮ್ಮ ಸಾಕ್ಷ್ಯದಲ್ಲಿ ನಿಖರವಾಗಿ ಆರೋಪಿತನನ್ನು ಗುರುತಿಸಿ ಮೇಲ್ಕಂಡ ಅಪರಾಧ ಮಾಡಿರುವ ಬಗ್ಗೆ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಸದರಿ ಸಾಕ್ಷ್ಯಗಳು ಹೊರಗಿನಿಂದ ಬೀಸಿದ ಕಲ್ಲಿನಿಂದ ಚಾಸಾ-1 ಹಾಗೂ 4 ರವರಿಗೆ ಪೆಟ್ಟಾಗಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಘಟನೆಯು ನಡೆದಿರುವ ಬಗ್ಗೆ ಸಾಕ್ಷಿಗಳು ಮೌಖಿಕ ಸಾಕ್ಷ್ಯವನ್ನು ಹೇಳಿದ್ದರು ಸಹ ಹಲ್ಲೆ ಮಾಡಿದ ಹಾಗೂ ಅವಾಚ್ಯ ಶಬ್ದಗಳನ್ನು ಬಳಸಿದ ಆರೋಪಿಗಳನ್ನು ನಿಖರವಾಗಿ ಗುರುತಿಸುವಲ್ಲಿ ಮೇಲ್ಕಂಡ ಎಲ್ಲಾ ಸಾಕ್ಷಿಗಳು ವಿಫಲರಾಗಿರುತ್ತಾರೆ. ಹಾಗೂ ಘಟನಾ ಸ್ಥಳದಲ್ಲಿ

ಹಲವಾರು ಜನರು ಇದ್ದ ಬಗ್ಗೆಯು ಸಹ ಸಾಕ್ಷ್ಯ ನುಡಿದಿದ್ದು ಆರೋಪಿತನ ಗುರುತಿನ ಬಗ್ಗೆ ಯಾವೊಂದು ಸಾಕ್ಷಿಯು ಸಾಕ್ಷ್ಯ ನುಡಿದಿಲ್ಲ.

20. ಆರೋಪಿತನು ಘಟನೆಯ ದಿವಸ ಅಕ್ರಮವಾಗಿ ಗುಂಪುಕಟ್ಟಿಕೊಂಡು ಚಾಸಾ-1, ಚಾಸಾ-4 ಹಾಗೂ 5 ರವರಿಗೆ ಅಕ್ರಮವಾಗಿ ತಡೆದು ನಿಲ್ಲಿಸಿ, ಕಲ್ಲಿನಿಂದ ಹಲ್ಲೆ ಮಾಡಿ, ಕರ್ತವ್ಯಕ್ಕೆ ಅಡ್ಡಿಪಡಿಸಿ ಅವಾಚ್ಯ ಶಬ್ದಗಳಿಂದ ಬೈದು ಚಾಸಾ-1 ಹಾಗೂ ಚಾಸಾ-4 ರವರಿಗೆ ಜೀವ ಬೆದರಿಕೆ ಹಾಕಿ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸಲು ವಿಫಲವಾಗಿರುತ್ತದೆ. ಸದರಿ ಪೂರಕವಲ್ಲದ ಸಾಕ್ಷಿಗಳ ಹೇಳಿಕೆಗಳ ಸಂಶಯದ ಲಾಭವು ಆರೋಪಿತನಿಗೆ ಹೋಗುತ್ತದೆ. ಕಾರಣ ಅಂಶ ನಂ.1 ರಿಂದ 7 ಇವುಗಳಿಗೆ ನಕಾರಾತ್ಮಕ ಎಂದು ಉತ್ತರಿಸಿದ್ದು ಇರುತ್ತದೆ.

21. **<u>ಅಂಶ ನಂ.8</u>:-** ಮೇಲೆ ಚರ್ಚಿಸಿದ್ದರ ಅನುಗುಣವಾಗಿ ಈ ಕೆಳಗಿನಂತೆ....

**<u>ಆ ದೇ ಶ</u>**

ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 248 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, 26ನೇ ಆರೋಪಿತನನ್ನು ಭಾರತೀಯ ದಂಡ ಸಂಹಿತೆ ಕಲಂ. 504, 324, 332, 353, 341, 148, 143 ಸಹವಾಚಕ ಕಲಂ.149 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕೆ ನಿರ್ದೋಷಿಯೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

26ನೇ ಆರೋಪಿತನನ್ನು ನ್ಯಾಯಾಲಯಕ್ಕೆ ಬರೆದುಕೊಟ್ಟ ವಯಕ್ತಿಕ ಮುಚ್ಚಳಿಕೆ ಹಾಗೂ ಜಾಮೀನುದಾರನು ಬರೆದುಕೊಟ್ಟ ಮುಚ್ಚಳಿಕೆಯನ್ನು ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ರನ್ವಯ ಇಂದಿನಿಂದ 6 ತಿಂಗಳವರೆಗೆ ಮುಂದುವರೆಸಲಾಗಿರುತ್ತದೆ.

ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿದ ಪಿ.ಆರ್.ನಂ. 163/2018 ರಲ್ಲಿರುವ 04 ಹಿಡಿ ಗಾತ್ರದ ಕಲ್ಲುಗಳು ಯಾವುದೇ ಮೌಲ್ಯ ಹೊಂದಿರದ ವಸ್ತುಗಳು ಆಗಿರುವುದರಿಂದ, ಅವುಗಳನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಈ ಮೂಲಕ ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 28 ನೇ ಮಾರ್ಚ-2026 ರಂದು ತೀರ್ಪನ್ನು ಘೋಷಿಸಲಾಯಿತು)

**(ಶ್ರೀ ಅನಿಲ ಅಮಾತೆ )**
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು
ಅಫಜಲಪೂರ.

**ಅನುಬಂಧ**

**ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ**

ಪಿ.ಡಬ್ಲ್ಯೂ -1 : ಧರೆಪ್ಪ ಬಿರಾದಾರ ತಂದೆ ಶಂಕರಗೌಡ

ಪಿ.ಡಬ್ಲ್ಯೂ -2 : ಪ್ರಕಾಶ ಮೈದರಗಿ ತಂದೆ ವೀರಭದ್ರಪ್ಪ

ಪಿ.ಡಬ್ಲ್ಯೂ -3 : ನಾಗರಾಜ ಮಾಡಿಯಾಳ ತಂದೆ ಶರಣಪ್ಪ

ಪಿ.ಡಬ್ಲ್ಯೂ -4 : ಸಂಜಯ ಪಾಟೀಲ ತಂದೆ ಸುಭಾಶ್ಚಂದ್ರ

ಪಿ.ಡಬ್ಲ್ಯೂ -5 : ಗುರಪ್ಪ ಬಟಗೇರಿ ತಂದೆ ಶಾಂತಪ್ಪ

ಪಿ.ಡಬ್ಲ್ಯೂ -6 : ರಮೇಶ ತಂದೆ ಚಂದಪ್ಪ

ಪಿ.ಡಬ್ಲ್ಯೂ -7 : ಮಂಜುನಾಥ ಕುಸಗಲ ತಂದೆ ಸಿದ್ದಪ್ಪ

**<u>ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ</u>**

| | | |
|---|---|---|
| ನಿ.ಪಿ.1 | : | ಪುರವಣಿ ಹೇಳಿಕೆ |
| ನಿ.ಪಿ.2 | : | ಪಂಚನಾಮೆ |
| ನಿ.ಪಿ.2 (ಎ) | : | ಪ್ರಾಸಾ-5 ರವರ ಸಹಿ |
| ನಿ.ಪಿ.2 (ಬಿ) | : | ಪ್ರಾಸಾ-6 ರವರ ಸಹಿ |
| ನಿ.ಪಿ.3 | : | ಗಾಯದ ಪ್ರಮಾಣ ಪತ್ರ |
| ನಿ.ಪಿ.3 (ಎ) | : | ಪ್ರಾಸಾ-6 ರವರ ಸಹಿ |
| ನಿ.ಪಿ.4 ರಿಂದ 6 | : | ಆರೋಪಿ ಪತ್ತೆ ಕುರಿತು ವರದಿಯ ಪ್ರತಿಗಳು |
| ನಿ.ಪಿ.4(ಎ ರಿಂದ 6(ಎ) | : | ಪ್ರಾಸಾ-6 ರವರ ಸಹಿ |
| ನಿ.ಪಿ.7 | : | ಪ್ರ.ವ.ವ. ನ್ಯಾಯಾಲಯಕ್ಕೆ ಸಲ್ಲಿಸಿದ ವರದಿಯ ಪ್ರತಿ |
| ನಿ.ಪಿ.7(ಎ) | : | ಪ್ರಾಸಾ-6 ರವರ ಸಹಿ |
| ನಿ.ಪಿ.8 | : | ದೂರು |
| ನಿ.ಪಿ.8(ಎ) | : | ಪ್ರಾಸಾ-7 ರವರ ಸಹಿ |

**<u>ಆರೋಪಿತನ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ</u>**

- ಇಲ್ಲ -

**<u>ಆರೋಪಿತನ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ</u>**

- ಇಲ್ಲ -

**ಅಭಿಯೋಜನೆ ಪರವಾಗಿ ಗುರ್ತಿಸಲಾದ ಮುದ್ದೆಮಾಲುಗಳ ವಿವರ**

ಮುದ್ದೇಮಾಲು-1 ರಿಂದ 4: 04 ಹಿಡಿ ಗಾತ್ರದ ಕಲ್ಲುಗಳು

ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಅಫಜಲಪೂರ.

Visit **ecourts.gov.in** for updates or download mobile app "**eCourts Services**" from Android or iOS.